**ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ**

ದಿನಾಂಕ : ೦೮-೦೮-೨೦೧೮

# ವರದಿ

## ಆತ್ಮ ವಿಶ್ವಾಸಕ್ಕೆ ಸಹಜ ಪ್ರತಿಭೆಗಿಂತ ಹೆಚ್ಚಿನ ಶಕ್ತಿ ಇದೆ

**ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಉದ್ಘಾಟಿಸಿ – ಪ್ರೊ. ನೀಲಗಿರಿ ತಳವಾರ್**

ಕೊಳ್ಳೇಗಾಲ : ೦೮ ಆಗಸ್ಟ್ : ಆತ್ಮ ವಿಶ್ವಾಸಕ್ಕೆ ಸಹಜ ಪ್ರತಿಭೆಗಿಂತ ಹೆಚ್ಚಿನ ಶಕ್ತಿಯಿದೆ. ಪ್ರತಿಭೆ ನಮ್ಮನ್ನು ಒಂದೆರಡು ಕ್ಷೇತ್ರಗಳಲ್ಲಿ ಯಶಸ್ವಿಯಾಗಿಸುತ್ತಿದೆ. ಆದರೆ ವಿವಿಧ ಕ್ಷೇತ್ರಗಳಲ್ಲಿನ ಪ್ರದರ್ಶನಗಳಿಗೆ ಪೂರಕ ತಯಾರಿಯ ಫಲಿತಾಂಶವಾದ ಆತ್ಮ ವಿಶ್ವಾಸ ನಮ್ಮ ಇಡೀ ಜೀವನವನ್ನೇ ಯಶಸ್ವಿಯಾಗಿಸಬಲ್ಲದು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ. ನೀಲಗಿರಿ ತಳವಾರ್ ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ೨೦೧೮-೧೯ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು.

ಓದು ಬುದ್ಧಿಗೆ ಸೋಪಾನವಾದರೆ, ಪಠ್ಯೇತರ ಚಟುವಟಿಕೆಗಳು ಆತ್ಮವಿಶ್ವಾಸದ ಮಜಲುಗಳು. ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳ ಸಹಜವಾಗಿಯೂ ಯಶಸ್ಸಿನ ಮೆಟ್ಟಿಲುಗಳನ್ನು ಏರಿರುವುದನ್ನು ಕಾಣಬಹುದಾಗಿದೆ. ವಿದ್ಯಾರ್ಥಿಗಳ ಕಲಿಕೆ ತರಗತಿ ಕೊಠಡಿಗಳಿಗೆ ಮಾತ್ರ ಸೀಮಿತವಾಗದೇ ಶಾಲಾ ಕಾಲೇಜುಗಳ ಹೊರಗಿನ ಶಿಕ್ಷಣವನ್ನು ಸಹ ಕಲಿಯುವಂತಾಗಬೇಕು, ಆಗ ಮಾತ್ರ ಯಶಸ್ಸು ಸಾಧ್ಯ ಎಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ, ದೈಹಿಕ ಶಿಕ್ಷಣ ವಿಭಾಗದ ಮಾಜಿ ನಿರ್ದೇಶಕರಾದ ಡಾ. ಸಿ ಕೃಷ್ಣ ರವರು ಪ್ರಸ್ತುತ ಕ್ರೀಡಾ ಕ್ಷೇತ್ರದಲ್ಲಿ "ಮಹಿಳೆಯರದ್ದೇ ಮೇಲುಗೈ" ಎಂಬುದನ್ನು ನೋಡುತ್ತಿದ್ದೇವೆ. ಕ್ರೀಡೆಗಳು ನಮಗೆ ಗೆಲುವಿನ ಜೊತೆಗೆ ಸೋಲುವುದನ್ನು ಕಲಿಸುತ್ತಿವೆ. ಸೋತಾಗ ನಾವು ಸೋಲೊಪ್ಪಿಕೊಳ್ಳದೆ ಅದು ಕಲಿಸುವ ಪಾಠಗಳನ್ನು ಮಾತ್ರ ಒಪ್ಪಿಕೊಳ್ಳಬೇಕು. ಸೋಲಿನ ನಿಜವಾದ ಕಾರಣಗಳು – ಗೆಲುವಿನ ಮೆಟ್ಟಿಲುಗಳಾಗುತ್ತವೆ. ಈ ರೀತಿಯ ಶಿಕ್ಷಣ ತರಗತಿ ಕೊಠಡಿಯಲ್ಲಿ ಸಿಗುವುದಿಲ್ಲ ಎಂದು ತಿಳಿಸುತ್ತಾ ವಿದ್ಯಾರ್ಥಿಗಳಿಗೆ ಪಠ್ಯದ ಜೊತೆಗೆ ಸಹ ಪಠ್ಯ ವಿಷಯಗಳಿಗೂ ಮಹತ್ವ ನೀಡಲು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶರವರು ವಿದ್ಯಾರ್ಥಿಗಳ ಜೀವನದ ಪ್ರತಿ ಹಂತದಲ್ಲೂ ಮೌಲ್ಯಮಾಪನಕ್ಕೆ ಒಳಗಾಗುವ ಅನಿವಾರ್ಯದ ಪ್ರಸ್ತುತ ಜಾಗತಿಕ ಪ್ರಪಂಚದ ಸಾಮಾನ್ಯ ಸಂಗತಿ ಪ್ರಚಲಿತ ವಿದ್ಯಮಾನಗಳ ಬಗ್ಗೆ ಅರಿವಿರಲಿ ಯಾವುದೇ ಯಶಸ್ವೀ ವ್ಯಕ್ತಿಯು ಓದುವ ಹವ್ಯಾಸ ಹೊಂದಿರುತ್ತಾನೆ. ಪುಸ್ತಕಗಳು ನಮಗೆ ಬೇರೆ ಬೇರೆ ಪ್ರಪಂಚಗಳನ್ನು ತೆರೆದಿಡುವ ಮಾಯಾ ಕಿಟಕಿಗಳಿದ್ದಂತೆ ಓದು ನಿಮ್ಮ ಹವ್ಯಾಸವಾಗಿರಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ವೇದಿಕೆಯಲ್ಲಿ ಕ್ರೀಡಾ ವೇದಿಕೆಯ ಸಂಚಾಲಕಿಯಾದ ಶ್ರೀಮತಿ ಕೆ ಆರ್ ಉಮಾದೇವಿ, ಸಾಂಸ್ಕೃತಿಕ ವೇದಿಕೆಯ ಸಂಚಾಲಕಿ ಶ್ರೀಮತಿ ಎನ್ ಭ್ರಮರಾಂಬ ಉಪಸ್ಥಿತರಿದ್ದರು.

ಕು. ಅನುಪಮ ಸ್ವಾಗತಿಸಿ, ಕು. ಅಂಜನಾ ವಂದಿಸಿದರು. ಕಾರ್ಯಕ್ರಮವನ್ನು ಕು.ಸಿಂಧು ನಿರೂಪಿಸಿದರು. ತದನಂತರ ವಿದ್ಯಾರ್ಥಿನಿಯರು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

2018–19ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆಯನ್ನು ಪ್ರೊ. ನೀಲಗಿರಿ ತಳವಾರ್‌ರವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀಮತಿ ಕೆ ಆರ್ ಉಮಾದೇವಿ, ಪ್ರಾಚಾರ್ಯ ಪ್ರೊ. ಉಮೇಶ, ಡಾ. ಸಿ. ಕೃಷ್ಣ ಹಾಗೂ ಶ್ರೀಮತಿ ಎನ್ ಭ್ರಮರಾಂಬರವರನ್ನು ಕಾಣಬಹುದು.



2018–19ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಪ್ರೊ. ನೀಲಗಿರಿ ತಳವಾರ್‌ರವರು ಉದ್ಘಾಟನಾ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಶ್ರೀಮತಿ ಕೆ ಆರ್ ಉಮಾದೇವಿ, ಡಾ. ಸಿ ಕೃಷ್ಣ, ಪ್ರಾಚಾರ್ಯ ಪ್ರೊ. ಉಮೇಶ ಹಾಗೂ ಶ್ರೀಮತಿ ಎನ್ ಭ್ರಮರಾಂಬರವರನ್ನು ಕಾಣಬಹುದು.



ಸಮಾರಂಭದಲ್ಲಿ ಭಾಗವಹಿಸಿರುವ ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು.

